# ಕರ್ನಾಟಕ ಜಾನಪದ ಪರಿಷತ್ತು

**ಯುನೆಸ್ಕೋ ಮಾನ್ಯತೆ ಪಡೆದ ಸಂಸ್ಥೆ**

ನಂ.1, ಜಲದರ್ಶಿನಿ ಬಡಾವಣೆ, ನ್ಯೂ ಬಿಇಎಲ್ ರಸ್ತೆ, ಎಂ.ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ
ಬೆಂಗಳೂರು– 560 054. ದೂರವಾಣಿ : 080–23605033



## “ನಾಡೋಜ ಎಚ್.ಎಲ್. ನಾಗೇಗೌಡ ರಾಷ್ಟ್ರೀಯ ಪ್ರಶಸ್ತಿ”

## ಪ್ರದಾನ ಸಮಾರಂಭ – 2024

ದಿನಾಂಕ : **22–11–2024, ಶುಕ್ರವಾರ** ಬೆಳಗ್ಗೆ 10–30ಕ್ಕೆ

ಸ್ಥಳ : **ರವೀಂದ್ರ ಕಲಾಕ್ಷೇತ್ರ,** ಜೆ.ಸಿ. ರಸ್ತೆ, ಬೆಂಗಳೂರು

ಸರ್ವರಿಗೂ ಸುಸ್ವಾಗತ

# ಕಾರ್ಯಕ್ರಮ

ಉದ್ಘಾಟನೆ
**ನಾಡೋಜ ಹಂಪ ನಾಗರಾಜಯ್ಯ**
ಪ್ರಖ್ಯಾತ ಲೇಖಕರು, ಬೆಂಗಳೂರು

ಪ್ರಶಸ್ತಿ ಪುರಸ್ಕೃತರು
**ಶ್ರೀ ಗುಡ್ಡಪ್ಪ ಜೋಗಿ**
ಕಿನ್ನರಿ ಜೋಗಿ ಕಲಾವಿದರು, ಶಿವಮೊಗ್ಗ ಜಿಲ್ಲೆ

ಪ್ರಶಸ್ತಿ ಪ್ರದಾನ
**ಸನ್ಮಾನ್ಯ ಶ್ರೀ ಶಿವರಾಜ್ ಎಸ್. ತಂಗಡಗಿ**
ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು, ಕರ್ನಾಟಕ ಸರ್ಕಾರ

ಮುಖ್ಯ ಅತಿಥಿ
**ಪ್ರೊ. ಪುರುಷೋತ್ತಮ ಬಿಳಿಮಲೆ**
ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು

**ಡಾ. ಧರಣೀದೇವಿ ಮಾಲಗತ್ತಿ** ಭಾ.ಪೊ.ಸೇ.
ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಅಧ್ಯಕ್ಷತೆ ಮತ್ತು ಪ್ರಾಸ್ತಾವಿಕ ನುಡಿ
**ಪ್ರೊ. ಹಿ.ಚಿ. ಬೋರಲಿಂಗಯ್ಯ**
ಅಧ್ಯಕ್ಷರು, ಕರ್ನಾಟಕ ಜಾನಪದ ಪರಿಷತ್ತು

ಸ್ವಾಗತ
**ಶ್ರೀ ಆದಿತ್ಯ ನಂಜರಾಜ್**
ಮ್ಯಾನೇಜಿಂಗ್ ಟ್ರಸ್ಟಿ, ಕರ್ನಾಟಕ ಜಾನಪದ ಪರಿಷತ್ತು

**ಪ್ರಶಸ್ತಿ ಪುರಸ್ಕೃತರಿಂದ ಕಿನ್ನರಿ ಜೋಗಿ ಕಲಾ ಪ್ರದರ್ಶನ**



# ನಾಡೋಜ
# ಎಚ್.ಎಲ್. ನಾಗೇಗೌಡ
# ರಾಷ್ಟ್ರೀಯ ಪ್ರಶಸ್ತಿ
# 2024

ನಾಡಿನ ಪ್ರಸಿದ್ಧ ಸಾಹಿತಿ, ಪ್ರವಾಸಿ ಕಂಡ ಇಂಡಿಯಾ ಮಾಲಿಕೆಯ ಕರ್ತೃ, ಜಾನಪದ ಲೋಕದ ನಿರ್ಮಾತೃ ನಾಡೋಜ ಎಚ್.ಎಲ್. ನಾಗೇಗೌಡ ಅವರು ಕಟ್ಟಿ ಬೆಳೆಸಿದ ಸಂಸ್ಥೆ ‘ಕರ್ನಾಟಕ ಜಾನಪದ ಪರಿಷತ್ತು’. ಶ್ರೀ ಎಚ್.ಎಲ್. ನಾಗೇಗೌಡರಿಗೆ ನೂರು ವಸಂತಗಳು ತುಂಬಿದ ನೆನಪಿನಲ್ಲಿ 2015ರಿಂದ ಅವರ ಹೆಸರಿನಲ್ಲಿ ರಾಷ್ಟ್ರ ಮಟ್ಟದಲ್ಲಿ ಜಾನಪದ ಕ್ಷೇತ್ರದಲ್ಲಿ ಅಪ್ರತಿಮ ಸೇವೆ ಸಲ್ಲಿಸಿದ ವ್ಯಕ್ತಿಯನ್ನು ಗುರುತಿಸಿ, ಅವರನ್ನು ಸನ್ಮಾನಿಸುವ ಪರಿಪಾಠವನ್ನು ಪರಿಷತ್ತು ಹಮ್ಮಿಕೊಂಡಿದೆ. ಪ್ರತಿ ವರ್ಷ ರಾಷ್ಟ್ರ ಮಟ್ಟದ ಜನಪದ ಕಲಾವಿದರನ್ನು ಗುರುತಿಸಿ ಒಂದು ಲಕ್ಷ ರೂ.ಗಳನ್ನೊಳಗೊಂಡ ಪ್ರಶಸ್ತಿ ನೀಡುತ್ತಾ ಬಂದಿದೆ. ಅದರಂತೆ, ಈ ಮೊದಲು 2015ರಲ್ಲಿ ಛತ್ತೀಸ್‌ಗಢದ ಪಂಡವಾನಿ ಕಲಾವಿದೆ ಪದ್ಮಭೂಷಣ ಶ್ರೀಮತಿ ತೀಜನ್ ಬಾಯಿ ಅವರಿಗೆ, 2016ರಲ್ಲಿ ಮಣಿಪಾಲದ ಹಸ್ತಶಿಲ್ಪ ಟ್ರಸ್ಟ್‌ನ ರೂವಾರಿ ಶ್ರೀ ವಿಜಯನಾಥ ಶೆಣೈ ಅವರಿಗೆ, 2017ರಲ್ಲಿ ರಾಜಸ್ಥಾನಿ ಜನಪದ ಸೂಫಿ ಹಾಗೂ ಕಬೀರ್ ತಾತ್ವಿಕ ಹಿನ್ನೆಲೆಯ ಪ್ರಸಿದ್ಧ ಸಂಗೀತ ಕಲಾವಿದ ಶ್ರೀ ಮುಖ್ತಿಯಾರ್ ಅಲಿ ಅವರಿಗೆ, 2018ರಲ್ಲಿ ಬಳ್ಳಾರಿ ಜಿಲ್ಲೆಯ ತೊಗಲು ಗೊಂಬೆ ಯಕ್ಷಗಾನ ಕಲಾವಿದರಾದ ನಾಡೋಜ ಶ್ರೀ ಬೆಳಗಲ್ಲು ವೀರಣ್ಣ ಅವರಿಗೆ, 2019ರಲ್ಲಿ ಚಿಕ್ಕಮಗಳೂರು ಜಿಲ್ಲೆಯ ಪ್ರಸಿದ್ಧ ವೀರಗಾಸೆ ಕಲಾವಿದರಾದ ಶ್ರೀ ಎಂ. ಆರ್. ಬಸಪ್ಪ ಅವರಿಗೆ, 2021ರಲ್ಲಿ ಉತ್ತರ ಪ್ರದೇಶದ ಸೂಫಿ ಸಂಗೀತಗಾರರಾದ ಜನಾಬ್ ಮೊಹಮ್ಮದ್ ಸಲೀಂ ಹಸನ್ ಚಿಸ್ತಿ ಅವರಿಗೆ, 2022ರಲ್ಲಿ ಕೇರಳದ ಪುಲ್ಲುವನ್ ಪಾಟ್ಟು ಹಾಡುಗಾರ್ತಿ ಶ್ರೀಮತಿ ಅಂಬುಜಾಕ್ಷಿ ಅವರಿಗೆ, 2023ನೇ ಸಾಲಿಗೆ ಆಂಧ್ರಪ್ರದೇಶದ ತೂರ್ಪು ಭಾಗವತಂ (ಪೂರ್ವ ಭಾಗವತಂ)ನ ಮೃದಂಗ ಕಲಾವಿದರಾದ ಶ್ರೀ ದೇವಗುಪ್ತಪು ವೀರವೆಂಕಟ ಜಗನ್ನಾದ ರಾವ್ ಅವರಿಗೆ ನೀಡಲಾಗಿತ್ತು. 2024ನೇ ಸಾಲಿಗೆ ಕರ್ನಾಟಕದ ಶಿವಮೊಗ್ಗ ಜಿಲ್ಲೆಯ ಪ್ರಸಿದ್ಧ ಕಿನ್ನರಿ ಜೋಗಿ ಕಲಾವಿದರಾದ ಶ್ರೀ ಕೆ. ಗುಡ್ಡಪ್ಪ ಜೋಗಿ ಅವರಿಗೆ ನೀಡಿ ಗೌರವಿಸಲಾಗುತ್ತಿದೆ.



# ಪ್ರಶಸ್ತಿ ಪುರಸ್ಕೃತರ ಪರಿಚಯ

## ಶ್ರೀ ಕೆ. ಗುಡ್ಡಪ್ಪ ಜೋಗಿ

### ಕಿನ್ನರಿ ಜೋಗಿ ಕಲಾವಿದರು

ಕರ್ನಾಟಕದ ಗಾಯನ ಪರಂಪರೆಯ ಸುಪ್ರಸಿದ್ಧ ಕಲಾ ಪ್ರಕಾರ "ಕಿನ್ನರಿ ಜೋಗಿ ಮೇಳ". "ಕಿನ್ನರಿ ಬೊಮ್ಮಯ್ಯ" ಎಂಬ ಕಲಾವಿದನ ಮಾಹಿತಿ 12ನೇ ಶತಮಾನದ ಶರಣರ ಸಾಹಿತ್ಯದಲ್ಲಿಯೇ ದೊರಕುತ್ತದೆ. ಬಸವ ಪುರಾಣದಲ್ಲಿ 'ಕಿನ್ನರಿ ವೀಣೆ'ಯನ್ನು ಕಿನ್ನರಿ ಬೊಮ್ಮಯ್ಯ ನುಡಿಸುತ್ತಾ ಶಿವಧ್ಯಾನ ಮಾಡುತ್ತಿದ್ದ ಉಲ್ಲೇಖ ಸಿಗುತ್ತದೆ.



ಕರ್ನಾಟಕದ ಪ್ರಖ್ಯಾತ ಕಲಾವಿದರಲ್ಲಿ ಒಬ್ಬರಾದ ಶ್ರೀ ಗುಡ್ಡಪ್ಪ ಜೋಗಿ ಅವರು ಈ ಕಥಾ ಪರಂಪರೆಯನ್ನು ಹಲವು ದಶಕಗಳಿಂದ ಮುಂದುವರಿಸಿಕೊಂಡು ಬರುತ್ತಿರುವ ಒಬ್ಬ ಅಪ್ರತಿಮ ಪ್ರತಿಭೆ. ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕಿನ ಹೊಸೂರಿನ ಶ್ರೀ ಗುಡ್ಡಪ್ಪ ಜೋಗಿ ಅವರಿಗೆ ಈಗ 72 ವರ್ಷ. ತಮ್ಮ 12ನೇ ವರ್ಷದಿಂದ ಹಿರಿಯರೊಡಗೂಡಿ ಭಕ್ತರು ಮತ್ತು ಜನತೆಯ ಮುಂದೆ ಸಾದರಪಡಿಸುತ್ತಾ ಬಂದಿರುವ ಶ್ರೀ ಗುಡ್ಡಪ್ಪ ಜೋಗಿ ಅವರು ಕರ್ನಾಟಕವಲ್ಲದೇ ಹೊರ ರಾಜ್ಯಗಳಲ್ಲಿಯೂ ತಮ್ಮ ಕಲೆಯನ್ನು ಪ್ರದರ್ಶಿಸಿದ್ದಾರೆ. ಇವರ ಕಲಾ ಪ್ರತಿಭೆಯನ್ನು ಮೆಚ್ಚಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಸಂದೇಶ ಪ್ರಶಸ್ತಿ, ಕೀರ್ತನಾಚಾರ್ಯ ಪ್ರಶಸ್ತಿ, ನಾಥಪಂಥ ಜೋಗಿ ಸಾಧಕ ಪ್ರಶಸ್ತಿ ಹಾಗೂ ಕರ್ನಾಟಕ ಜಾನಪದ ಪರಿಷತ್ತಿನ ದೊಡ್ಡಮನೆ ಲಿಂಗೇಗೌಡ ಪ್ರಶಸ್ತಿಗಳು ಸಂದಿವೆ.

ಕಿನ್ನರಿ ಜೋಗಿಗಳು ಪ್ರಧಾನವಾಗಿ ಅರ್ಜುನ ಜೋಗಿ ಕಥಾನಕವನ್ನು ಸುಧೀರ್ಘವಾಗಿ ಹಾಡುತ್ತಾರೆ. ಮಹಾಭಾರತದ ವಿವಿಧ ಪರ್ವಗಳನ್ನು ಅನೇಕ ರಾತ್ರಿಗಳವರೆಗೆ ಹಾಡಬಲ್ಲ ಈ ಕಲಾವಿದರು ಸಂದರ್ಭಾನುಸಾರ ಇತರೆ ಕಥನ ಕಾವ್ಯಗಳನ್ನು ಹಾಡುವಲ್ಲಿಯೂ ನಿಪುಣರು. ಅತ್ಯಂತ ಸುಶ್ರಾವ್ಯ ಕಂಠವನ್ನು ಹೊಂದಿರುವ ಶ್ರೀ ಗುಡ್ಡಪ್ಪ ಜೋಗಿ ಅವರು ತಮ್ಮ ಹಾವಭಾವಗಳಿಂದ ಹಾಗೂ ಅರ್ಥಗರ್ಭಿತ ಸಂಭಾಷಣೆ ಮೂಲಕ ಜನಸಮುದಾಯವನ್ನು ಆಕರ್ಷಿಸಬಲ್ಲ ಪ್ರತಿಭಾವಂತರು. ಮಹಾಭಾರತದ ಅರ್ಜುನ ಜೋಗಿ ಕಥೆಯನ್ನಷ್ಟೇ ಅಲ್ಲದೇ ಬಸವಕುಮಾರ–ಲೋಹಿತಕುಮಾರ, ಸೋಮಶೇಖರ– ಚಿತ್ರಶೇಖರ, ಅಶಾವತಿ–ಶಾಮಸೇನ, ಸತಿ ಶೀಲಾವತಿ, ಲಕ್ಷಾಪತಿ ರಾಜನಕಥೆ ಮುಂತಾದ ಸುಧೀರ್ಘ ಕಥನಕಾವ್ಯಗಳನ್ನು ಸೊಗಸಾಗಿ ಹಾಡುತ್ತಾರೆ. ಹೆಜ್ಜೆ– ಗೆಜ್ಜೆಗಳ ಸಮೇತ ಕಿನ್ನರಿಯನ್ನು ಕೈಯಲ್ಲಿ ಹಿಡಿದು ಹಾಡಲು ನಿಂತರೆಂದರೆ ಅವರ ಲಾಸ್ಯಕ್ಕೆ, ನಿರೂಪಣಾ ಕ್ರಮಕ್ಕೆ ತಲೆದೂಗದವರೇ ಇಲ್ಲ !

ಶ್ರೀ ಗುಡ್ಡಪ್ಪ ಜೋಗಿಯವರು ಅಸಕ್ತಿಯುಳ್ಳ ಅನೇಕ ಯುವಕರಿಗೂ ತಮ್ಮ ಕಲೆಯನ್ನು ಕಲಿಸುವ ಮೂಲಕ ಆ ಪರಂಪರೆಯ ಉಳಿವಿಗೆ ಕಾರಣರಾಗಿದ್ದಾರೆ. ಒಂದು ಕಾಲಕ್ಕೆ ಅಲೆಮಾರಿಯಾಗಿ ಊರಿಂದ ಊರಿಗೆ ಸಾಗುತ್ತಾ ಈ ಕಲೆಯನ್ನು ಪ್ರಚುರಪಡಿಸಿದ ಶ್ರೀಯುತರು ಇತ್ತೀಚಿನ ವರ್ಷಗಳಲ್ಲಿ ಒಂದು ಕಡೆ ನೆಲೆ ನಿಂತಿದ್ದಾರಾದರೂ ಅಕ್ಷರಶಃ ಈಗಲೂ ಅಲೆಮಾರಿಯೇ. ಅನೇಕ ರಾತ್ರಿಗಳವರೆಗೆ ಅಹರ್ನಿಶಿ ಹಾಡಬಲ್ಲ ಗುಡ್ಡಪ್ಪನವರು ತಮ್ಮ ಜೊತೆಗಿನ ಸಹ ಗಾಯಕರನ್ನು ಪ್ರೋತ್ಸಾಹಿಸುತ್ತಾ ತಂಡವನ್ನು ಮುನ್ನಡೆಸುತ್ತಿದ್ದಾರೆ.

**ಕರ್ನಾಟಕ ಜಾನಪದ ಪರಿಷತ್ತು ಇವರ ಜೀವಮಾನದ ಸಾಧನೆಯನ್ನು ಗುರುತಿಸಿ 2024ನೇ ಸಾಲಿನ ನಾಡೋಜ ಎಚ್. ಎಲ್. ನಾಗೇಗೌಡ ರಾಷ್ಟ್ರೀಯ ಪ್ರಶಸ್ತಿಯನ್ನು ನೀಡಿ ಗೌರವಿಸುತ್ತಿದೆ.**